# ಶ್ರೀರಾಮಕೃಷ್ಣರ ಅಂತ್ಯಲೀಲೆ

**ಸ್ವಾಮಿ ಪ್ರಭಾನಂದ**

*"ಶ್ರೀರಾಮಕೃಷ್ಣರ ಅಂತ್ಯಲೀಲೆ" ಎಂಬ ಪುಸ್ತಕವನ್ನು ಬರೆದವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಕೊಲ್ಕತದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಕಾರ್ಯದರ್ಶಿಗಳೂ ಆಗಿರುವ ಪೂಜ್ಯ ಸ್ವಾಮಿ ಪ್ರಭಾನಂದಜಿಯವರು. ಶ್ರೀರಾಮಕೃಷ್ಣರ ಜೀವನದ ಕೊನೆಯ ದಿನಗಳಿಗೆ ಸಂಬಂಧಿಸಿದ ಅಜ್ಞಾತವಾದ ಹಲವು ಘಟನೆಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಈ ಗ್ರಂಥವನ್ನು ಸಿದ್ಧಪಡಿಸಲಾಗಿದೆ. ವಿಶೇಷವಾಗಿ ಮಹೇಂದ್ರನಾಥ ಗುಪ್ತರ (ಮಾಸ್ಟರ್ ಮಹಾಶಯ) ದಿನಚರಿಯಿಂದ ಅಪ್ರಕಟಿತ ಭಾಗಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಬಂಗಾಳಿಮೂಲದ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದವರು ದಕ್ಷಿಣೇಶ್ವರದಲ್ಲಿರುವ ಶ್ರೀಶಾರದಾ ಮಠದ ಪ್ರಧಾನ ಕೇಂದ್ರದಲ್ಲಿ ಸೇವೆಸಲ್ಲಿಸುತ್ತಿರುವ ಪ್ರವ್ರಾಜಿಕಾ ಪರಮಪ್ರಾಣಾ ಅವರು. ಅದರ ಸಂಗ್ರಹರೂಪವನ್ನು ಇಲ್ಲಿ ಕೊಡಲಾಗಿದೆ.*

೧೮೮೫ರಲ್ಲಿ ಶ್ರೀರಾಮಕೃಷ್ಣರ ಗಂಟಲಿನಲ್ಲಿ ನೋವು ಕಾಣಿಸಿಕೊಂಡಿತು. ಆರಂಭದಲ್ಲಿ ಈ ಬಗ್ಗೆ ಯಾರೂ ಹೆಚ್ಚು ಚಿಂತಿಸಲಿಲ್ಲ. ಡಾಕ್ಟರ್ ಪರೀಕ್ಷಿಸಿ ಇದು "ಕ್ಲರ್ಜಿಮೆನ್ಸ್ ಸೋರ್ ತ್ರೋಟ್" (Clergyman"s sore-throat) ಎಂದರು. ಚಿಕಿತ್ಸೆಯ ವ್ಯವಸ್ಥೆಯೂ ಆಯಿತು. ಶ್ರೀರಾಮಕೃಷ್ಣರು ವೈದ್ಯರ ಮಾತಿನಂತೆ ನಡೆಯುತ್ತಿದ್ದರೂ ಎರಡು ಸಲಹೆಗಳನ್ನು ಮಾತ್ರ ಅವರಿಗೆ ಅನುಸರಿಸಲು ಸಾಧ್ಯವಾಗಲಿಲ್ಲ. ಸ್ವಾಮಿ ಶಾರದಾನಂದರು ಲೀಲಾಪ್ರಸಂಗದಲ್ಲಿ ಬರೆಯುತ್ತಾರೆ—"ಎರಡು ವಿಚಾರಗಳು ಅವರ ಹತೋಟಿಯನ್ನು ಮೀರಿದ್ದವು. (i) ಪ್ರಗಾಢವಾದ ಈಶ್ವರಪ್ರೇಮ ಹಾಗೂ (ii) ಸಂಸಾರತಪ್ತ ಜನಗಳಿಗೆ ಕರುಣೆ ದೋರಿ ಅವರುಗಳೊಂದಿಗೆ ಮಾತುಕತೆಯಾಡುವುದು. ಈಶ್ವರ ಪ್ರೇಮದಿಂದ ವಿಹ್ವಲರಾಗಿ ಸಮಾಧಿಸ್ಥರಾಗುವುದನ್ನು ನಿಲ್ಲಿಸಲು ಅವರಿಗೆ ಆಗಲಿಲ್ಲ."

ಕಾಯಿಲೆ ದಿನದಿನಕ್ಕೆ ಉಲ್ಬಣವಾಗಿ, ಶರೀರ ಕ್ರಮೇಣ ದುರ್ಬಲವಾಗತೊಡಗಿತು. ಇಷ್ಟಾದರೂ ಅವರು ಕೀರ್ತನೆ ಮಾಡುವುದು ಹಾಗೂ ಜನಗಳೊಂದಿಗೆ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಮಾತನಾಡುವುದನ್ನು ಒಂದು ದಿನದ ಮಟ್ಟಿಗೂ ನಿಲ್ಲಿಸಲಿಲ್ಲ. ಇವುಗಳು ಒಂದೊಂದು ದಿವಸ ವಿಪರೀತವಾದಾಗ ಅವರ ಗಂಟಲಿನ ನೋವು ಹೆಚ್ಚಾಗಿ ಕಷ್ಟಪಡುತ್ತಿದ್ದರು. ಆದರೆ ಬಹುಬೇಗ ಇದನ್ನು ಮರೆತು ಮತ್ತೆ ಮೊದಲಿನಂತೆ ಭಕ್ತರೊಡನೆ ಆನಂದದಿಂದ ಬೆರೆಯುತ್ತಿದ್ದರು. ಆ ವರ್ಷ ಪಾನಿಹಾಟಿ ಎಂಬ ಜಾಗದ "ಅವಲಕ್ಕಿ ಉತ್ಸವ"ಕ್ಕೆ ಹೋಗಿ ಸಂಕೀರ್ತನೆಯಲ್ಲಿ ಮತ್ತರಾಗಿ, ಮತ್ತೆ ಮತ್ತೆ ಭಾವಸಮಾಧಿಯಲ್ಲಿ ತನ್ಮಯರಾಗಿದ್ದರು. ಇದರ ಫಲವಾಗಿ ಆ ದಿನ ಗಂಟಲಿನ ನೋವು ಪ್ರಕೋಪಕ್ಕೆ ಹೋಯಿತು. ಹೀಗಾಗುತ್ತ ಒಮ್ಮೆ ಬಾಯಿಯಿಂದ ರಕ್ತ ಬಿದ್ದುದನ್ನು ಕಂಡು ಜನ ಭೀತರಾದರು. ಕಡೆಗೊಮ್ಮೆ ಭಕ್ತರ ಒತ್ತಾಯಕ್ಕೆ ಮಣಿದು ಶ್ರೀರಾಮಕೃಷ್ಣರು ಚಿಕಿತ್ಸೆಗಾಗಿ ಕಲ್ಕತ್ತಕ್ಕೆ ಹೋಗಿ ನೆಲೆಸಲು ಸಮ್ಮತಿಸಲೇ ಬೇಕಾಯಿತು.

## ಮೊದಲನೆಯ ಬಾಡಿಗೆ ಮನೆ

ದಕ್ಷಿಣೇಶ್ವರದಿಂದ ಶ್ರೀರಾಮಕೃಷ್ಣರು ಬೆಳಗಿನ ಜಾವವೇ ಕಲ್ಕತ್ತೆಗೆ ಬಂದಿದ್ದಾರೆ. ಆ ದಿನ ಶನಿವಾರ ೨೬ನೇ ಸೆಪ್ಟೆಂಬರ್ ೧೮೮೫. ಶ್ರೀರಾಮಕೃಷ್ಣರು ದಕ್ಷಿಣೇಶ್ವರವನ್ನು ಬಿಟ್ಟು ಬಂದಿದ್ದಾರೆ. ಸುಮಾರು ಮೂವತ್ತು ವರ್ಷಗಳ ಬಹುಸ್ಮೃತಿಯ ಖನಿಯಾದ ದಕ್ಷಿಣೇಶ್ವರದ ಆ ತಪೋವನವನ್ನು ಅಂತಿಮವಾಗಿ ತ್ಯಜಿಸಿ ಬಂದಿದ್ದಾರೆ. ಈ ವಿಚಾರವನ್ನೆತ್ತಿ ಶ್ರೀರಾಮಕೃಷ್ಣರು ಹತ್ತಿರದಲ್ಲಿದ್ದ ಭಕ್ತರಿಗೆ ಹೇಳುತ್ತಾರೆ : "ಎರಡು ಕಾರಣಗಳಿವೆ ಹೊರಟು ಬರಲು—(ಅಲ್ಲಿಯ ಕೋಣೆ) ತುಂಬ ತೇವವಾಗಿರುತ್ತಿತ್ತು. (ಅದಲ್ಲದೆ) ಪಾಯಖಾನೆ ಹತ್ತಿರದಲ್ಲಿಲ್ಲ..."

ರಾಮಚಂದ್ರದತ್ತ (ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲೊಬ್ಬರು) ಬರೆಯುತ್ತಾರೆ : "ಶ್ರಾವಣಮಾಸದ ಕೊನೆ ಆಗ. ಯಾವಾಗಲೂ ಮಳೆ ಬರುತ್ತಿರುತ್ತಿತ್ತು. ಗಂಗೆಯ ನೀರು ಉಕ್ಕಿ ತೋಟದೊಳಗೆ ನುಗ್ಗುತ್ತಿತ್ತು. ತೋಟದ ಹತ್ತಿರದಲ್ಲೇ ಇದ್ದ ಅವರ ಕೋಣೆಯು ಇದರಿಂದ ಯಾವಾಗಲೂ ತೇವವಾಗಿರುತ್ತಿತ್ತು." ಶ್ರೀ ಅಕ್ಷಯಕುಮಾರ್ ಸೇನ್ (ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾದ ಮತ್ತೊಬ್ಬ ಗೃಹೀಭಕ್ತ) ತಮ್ಮ "ಶ್ರೀರಾಮಕೃಷ್ಣ ಪೂಂಥಿ"ಯಲ್ಲಿ ಶ್ರೀರಾಮಕೃಷ್ಣರ ದಕ್ಷಿಣೇಶ್ವರದ ವಾಸಸ್ಥಾನದ ವಿಚಾರ ಬರೆಯುತ್ತಾರೆ :

ಊರಿನೊಡಲಿನಲೊಂದು ಹೂವಿನ ತೋಟ
ಕೆಲವೇ ಗಜ ದೂರದಲ್ಲಿದೆ ಗಂಗಾತಟ
ಹನಿತುಂಬಿದ ತಂಗಾಳಿಯ ಅನವರತ ಆಟ
ಪ್ರಭುವಿನ ಆ ಮಂದಿರದೊಳಹೊರಗದರ ಸುಳಿದಾಟ

.... .... ...

ಶ್ರೀಪ್ರಭುವಿನ ಮಂದಿರದಲದೋ ಪಶ್ಚಿಮ ದಿಕ್ಕು
ನೆಲವೆಲ್ಲಿ ಕಾಣುತ್ತಿದೆ ಅಲ್ಲಿ ಬರಿಯ ನೀರು
ಯಾವಾಗಲೂ ಹರಿಯುತ್ತದೆ ತುಂಬಿ ಉಕ್ಕಿ ನಿಲ್ಲದೆ,
ಇದರಿಂದ ಆ ಜಾಗ ನೆನೆದು ತೇವವಾಗಿದೆ.

ದಕ್ಷಿಣೇಶ್ವರವನ್ನು ಬಿಟ್ಟ ಶ್ರೀರಾಮಕೃಷ್ಣರನ್ನು ಭಕ್ತರು ಕಲ್ಕತ್ತೆಕ್ಕೆ ಕರೆತಂದರು. ಗಂಗಾನದಿಯ ಹತ್ತಿರ ದುರ್ಗಾಚರಣ ಮುಖರ್ಜಿಯ ರಸ್ತೆಯಲ್ಲಿ ಒಂದು ಚಿಕ್ಕ ಬಾಡಿಗೆಯ ಮನೆಯನ್ನು ತೆಗೆದುಕೊಳ್ಳಲಾಯಿತು. ಈ ವಿಷಯವಾಗಿ ಸ್ವಾಮಿ ಶಾರದಾನಂದರು ಬರೆಯುತ್ತಾರೆ: "ಗಂಗಾತೀರದ ಕಾಳಿಯ ದೇವಸ್ಥಾನದ ಆ ವಿಶಾಲ ಉದ್ಯಾನವನದ ಮುಕ್ತಪರಿಸರದಲ್ಲಿ ನೆಲೆಸಿ ಅಭ್ಯಾಸವಾಗಿದ್ದ ಶ್ರೀರಾಮಕೃಷ್ಣರು ಈ ಸಣ್ಣ ಮನೆಯನ್ನು ಪ್ರವೇಶಿಸಿದ್ದೇ 'ಇಲ್ಲಿರಲು ನನಗೆ ಸಾಧ್ಯವೇ ಇಲ್ಲ' ಎಂದವರೇ ಕೂಡಲೇ ಅಲ್ಲಿಂದ ನಡೆದುಕೊಂಡೇ ಬಲರಾಮ ಬಸುವಿನ ಮನೆಗೆ ಹೊರಟು ಬಂದರು." ಈ ಬಗ್ಗೆ ಸ್ವಾಮಿ ಅದ್ಭುತಾನಂದರು ಹೇಳುತ್ತಾರೆ : "ಬಾಗ್‌ಬಜಾರಿನಲ್ಲಿ ತೆಗೆದುಕೊಂಡ ಬಾಡಿಗೆ ಮನೆಯನ್ನು ಶ್ರೀರಾಮಕೃಷ್ಣರು ಇಷ್ಟಪಡಲಿಲ್ಲ. 'ಎಂಥ ಸಣ್ಣ ಮನೆ! ಇಲ್ಲಿದ್ದರೆ ಉಸಿರುಕಟ್ಟಿ ಹೋಗುತ್ತದೆ. ನೀವು ಬೇರೆ ಮನೆಯನ್ನು ಹುಡುಕಿ' ಎಂದರು." ಬಲರಾಮ ಬಸುವಿನ ಮನೆಗೆ ಬಂದ ನಂತರ ಶ್ರೀರಾಮಕೃಷ್ಣರು ಅಲ್ಲಿ ತಮ್ಮನ್ನು ಕಾಣಲು ಬಂದ ಗಿರೀಶ್‌ಚಂದ್ರ ಘೋಷನಿಗೆ ಹೇಳಿದರು, "ಇದು ಮನೆಯಂತೆ ಇದೆ. ಅಲ್ಲಿಗೆ (ಆ ಬಾಡಿಗೆ ಮನೆಗೆ) ಹೋಗಲು ಇಚ್ಛೆ ಇಲ್ಲ" ಎಂದು. ಅವರು ಇನ್ನೊಂದು ಮಾತನ್ನೂ ಸೇರಿಸಿದರು, "(ಆ ಮನೆಯಲ್ಲಿ ಇರುವುದು) 'ಗಂಗಾಯಾತ್ರೆ'ಯಂತೆ."(ಆಗಿನ ಕಾಲದ ಸಂಪ್ರದಾಯದಂತೆ ಮೃತ್ಯುವಶನಾದ ವ್ಯಕ್ತಿಯನ್ನು ಗಂಗಾಜಲವನ್ನು ಸ್ಪರ್ಶಿಸಿ ಶರೀರ ತ್ಯಾಗ ಮಾಡಲಿ ಎನ್ನುವ ಉದ್ದೇಶದಿಂದ ಗಂಗಾತೀರದಲ್ಲಿ ಮಲಗಿಸಲಾಗುತ್ತಿತ್ತು. ಇದಕ್ಕೆ 'ಗಂಗಾಯಾತ್ರೆ' ಎನ್ನುತ್ತಿದ್ದರು.) ರಾಮಚಂದ್ರದತ್ತರು ಬರೆದಿದ್ದಾರೆ: "ಶ್ರೀರಾಮಕೃಷ್ಣರು ಈ ಬಾಡಿಗೆಯ ಮನೆಯನ್ನು ಕಂಡಿದ್ದೇ ಉದ್ಗರಿಸಿದರು,'ಇದೇನು ನನಗೆ ಗಂಗಾಯಾತ್ರೆ ಮಾಡಿಸುತ್ತಿದ್ದಾರೋ ಏನು ಕಥೆ? ಈ ಮನೆಯಲ್ಲಿ ಇರಲು ನನಗೆ ಸಾಧ್ಯವೇ ಇಲ್ಲ' ಎಂದು."

## ಬಲರಾಮನ ಮನೆಯಲ್ಲಿ ಏಳುದಿನಗಳು

ಆ ಸಮಯದಲ್ಲಿ ಬಾಗ್‌ಬಜಾರಿನಲ್ಲಿ ಮೂವತ್ತಕ್ಕೂ ಹೆಚ್ಚು ಭಕ್ತರ ಕುಟುಂಬಗಳು ವಾಸಿಸುತ್ತಿದ್ದವೆಂದು ತಿಳಿದು ಬಂದಿದೆ. ಭಕ್ತ ಬಲರಾಮನ ಮನೆ ಇರುವುದು ಇಲ್ಲಿಯೇ (ಮನೆಯ ಈಗಿನ ವಿಳಾಸ, ೭, ಗಿರೀಶ್ ಅವೆನ್ಯೂ, ಬಾಗ್ ಬಜಾರ್, ಕೊಲ್ಕತಾ). ಈ ಬಲರಾಮನ ಭವನ ಆಗ ಎಲ್ಲ ಭಕ್ತರಿಗೆ ಸುಪರಿಚಿತವಾಗಿತ್ತು. ನೂರಕ್ಕೂ ಹೆಚ್ಚು ಬಾರಿ ಶ್ರೀರಾಮಕೃಷ್ಣರ ಪದಸ್ಪರ್ಶದಿಂದ ಧನ್ಯವಾಗಿದೆ ಈ ಭವನ. ಈ ಮನೆಯನ್ನು ಈಗ "ಬಲರಾಮ ಮಂದಿರ" ಎಂದೇ ಕರೆಯಲಾಗುತ್ತದೆ. ಈ ದೇವಾಲಯದಲ್ಲಿ ಪೂಜಿತನಾಗುತ್ತಿರುವ ದೇವತೆ ಬಲರಾಮ ಬಸುವಿನಿಂದ ಆರಾಧಿತರಾದ ಶ್ರೀರಾಮಕೃಷ್ಣ.'ರಾಮಕೃಷ್ಣ ಪೂಂಥಿ" ಯಲ್ಲಿ ಅಕ್ಷಯಕುಮಾರ್ ಸೇನ್ ಬರೆಯುತ್ತಾರೆ—



ಭವನದ ಮಹಿಮೆಯ ವರ್ಣನೆಗೆಲ್ಲಿದೆ ಅಂತ್ಯ!
ಇದು ಗೌರಾಂಗನ ಅವತಾರದ ಶ್ರೀವಾಸನ ಮನೆಯಂತೆ.
ಜಗನ್ನಾಥನ ಪ್ರತಿಮೂರ್ತಿಯದಾಗಿದೆ ಇಲ್ಲಿ ಪ್ರತಿಷ್ಠೆ.
ಅನವರತ ಬಹುಪ್ರೀತಿಯ ಪೂಜೆ, ನೈವೇದ್ಯಗಳನಂತ ರೀತಿ
ಮಂಗಳ ಉತ್ಸವರವ ಕರ್ಣಗೋಚರ ದಿವಾರಾತ್ರಿ.
ಬಸುವಿನ ಈ ಭವನ ಆ ಜಗನ್ನಾಥ ಕ್ಷೇತ್ರ ಸಮಾನ!

ಈ ಬಲರಾಮನ ಮನೆಯಲ್ಲಿಯೇ ಬಹುಬಾರಿ "ಪ್ರೇಮದ ದರ್ಬಾರಿನಲ್ಲಿ ಆನಂದದ ಸಂತೆ" ನೆರೆದಿತ್ತು. ಶ್ರೀರಾಮಕೃಷ್ಣರನ್ನು ಕೇಂದ್ರವಾಗಿಟ್ಟುಕೊಂಡು ನಡೆಯುತ್ತಿದ್ದ ಈ ಆನಂದದ ಸಂತೆ ಇಲ್ಲಿ ಕೊನೆಯ ಬಾರಿ ನಡೆದದ್ದು ೨೬ನೇ ಸೆಪ್ಟೆಂಬರ್ ೧೮೮೪ರಿಂದ ೨ನೇ ಅಕ್ಟೋಬರ್ ೧೮೮೪ರವರೆಗಿನ ಏಳು ದಿನಗಳು. ಈ ಏಳುದಿನಗಳ ಒಂದು ಸಂಕ್ಷಿಪ್ತ ಚಿತ್ರವನ್ನು ಇಲ್ಲಿ ಪ್ರಧಾನವಾಗಿ ಮಾಸ್ಟರ್ ಮಹಾಶಯರ ಡೈರಿಯನ್ನು ಆಧರಿಸಿ ಕೊಡಲಾಗಿದೆ.

## ಶನಿವಾರ ೨೬ ನೇ ಸೆಪ್ಟೆಂಬರ್ ೧೮೮೪

ಬಾಡಿಗೆಯ ಮನೆಯನ್ನು ತ್ಯಜಿಸಿ ಶ್ರೀರಾಮಕೃಷ್ಣರು ನಡೆದುಕೊಂಡೇ ಬಲರಾಮನ ಮನೆಯನ್ನು ಬಂದು ಸೇರಿದಾಗ ಸಮಯ ಬೆಳಿಗ್ಗೆ ೯ ಗಂಟೆ ೧೫ ನಿಮಿಷಗಳು. ಬಲರಾಮ ಅವರನ್ನು ಆದರದಿಂದ ಸ್ವಾಗತಿಸಿದನು. ಮಾಸ್ಟರ್ ಮಹಾಶಯರ ಮನೆಯೂ ಇಲ್ಲಿಗೆ ಹತ್ತಿರ. ಅವರೂ ಬಲರಾಮನ ಮನೆಗೆ ಬಂದಿದ್ದಾರೆ. ಸುತ್ತಮುತ್ತಲೂ ಬಹುಬೇಗ ಸುದ್ದಿ ಹರಡಿತು. ಪ್ರಸಿದ್ಧ ನಾಟಕಕಾರ ಗಿರೀಶ್‌ಚಂದ್ರ ಘೋಷನೂ ಅವರನ್ನು ಕಾಣಲು ಬಂದಿದ್ದಾನೆ. ಶ್ರೀರಾಮಕೃಷ್ಣರು ಅವನೊಂದಿಗೆ ಮಾತನಾಡುತ್ತಾ, ತಾವು ಬಿಟ್ಟುಬಂದ ಬಾಡಿಗೆ ಮನೆಗೆ ಹೋಗಲು ತಮಗಿಷ್ಟವಿಲ್ಲವೆಂದರು. ಬಲರಾಮನ ಮನೆಯನ್ನು ನಿರ್ದೇಶಿಸಿ, "ಇದು ಸ್ವಂತ ಮನೆಯಂತೆಯೇ ಅನ್ನಿಸುತ್ತದೆ" ಎಂದರು.

ಆ ದಿನವಿಡೀ ಅವರನ್ನು ಕಾಣಲು ಜನ ಅಲ್ಲಿಗೆ ಬಂದು ಹೋಗುತ್ತಲೇ ಇದ್ದರು. ಮಾಸ್ಟರ್ ಮಹಾಶಯರು ಆ ರಾತ್ರಿ ಅಲ್ಲಿಯೇ ಉಳಿದರು. ಶ್ರೀರಾಮಕೃಷ್ಣರ ಕೋಣೆಯಲ್ಲಿಯೇ ಅವರು ಮಲಗಿದರು. ಶ್ರೀರಾಮಕೃಷ್ಣರನ್ನು ಕಾಣಲು ಬರುವವರ ಸಂಖ್ಯೆ ಕ್ರಮೇಣ ಹೆಚ್ಚಾಗತೊಡಗಿತು. ಇದರಿಂದ ಬಲರಾಮನ ಮನೆ ಚಿಕಿತ್ಸಾಕೇಂದ್ರವಾಗದೆ ಉತ್ಸವಕ್ಷೇತ್ರವಾಗಿ ಪರಿಣಮಿಸಿತು. ಈ ಬಗ್ಗೆ "ರಾಮಕೃಷ್ಣ ಪೂಂಥಿ" ವರ್ಣಿಸುತ್ತದೆ:

ಬಸುವಿನ ಭವನದಿ ಶ್ರೀಪ್ರಭುವಿನ ಆಗಮನ
ಹಬ್ಬಿತೊಮ್ಮೆಲೆ ಸುದ್ದಿ ಕಿವಿಕಿವಿಗೆ ಬಹುದೂರ
ಜನನಿಬಿಡವಾಯಿತಾಗ ಭವನದಂತರ
ಲೆಕ್ಕವಿಡಲು ಸಾಧ್ಯವೇನು? ಸಂಖ್ಯೆ ಅಲ್ಲಿ ಅಗಣಿತ
ಪ್ರಭುವಿನ ಕಷ್ಟವನು ಚಿಂತಿಸಲೆಲ್ಲಿ ಸಮಯವೆಲ್ಲಿ?
ಲಭ್ಯವಾದ ದರುಶನದ ಆನಂದದಿ ಮುಳುಗಿರುವಲ್ಲಿ.

## ಭಾನುವಾರ ೨೭ನೇ ಸೆಪ್ಟೆಂಬರ್ ೧೮೮೫

ಶ್ರೀರಾಮಕೃಷ್ಣರು ಬಲರಾಮನ ಭವನದ ಮಹಡಿಯ ಒಂದು ಕೋಣೆಯಲ್ಲಿ ಇದ್ದಾರೆ. ಕಳೆದರಾತ್ರಿ ಅಲ್ಲಿಯೇ ತಂಗಿದ ಮಾಸ್ಟರ್ ಮಹಾಶಯರು ತಮ್ಮ ಮನೆಗೊಮ್ಮೆ ಹೋಗಿ ಬೆಳಗಿನ ಜಾವವೇ ಹಿಂದಿರುಗಿ ಬಲರಾಮನ ಮನೆಗೆ ಬಂದಿದ್ದಾರೆ. ಅವರು ಹತ್ತಿರದಲ್ಲಿಯೇ ಇರುವ ಶ್ಯಾಮಪುಕುರ ಎಂಬ ಜಾಗದ ಮೆಟ್ರೋಪಾಲಿಟನ್ ಸ್ಕೂಲಿನ ಹೆಡ್‌ಮಾಸ್ಟರ್. ಮಾಸ್ಟರ್ ಇಲ್ಲಿಂದಲೇ ನೇರವಾಗಿ ತಮ್ಮ ಸ್ಕೂಲಿಗೆ ಹೋದರು. ಸ್ಕೂಲು ಮುಚ್ಚಿದ ಮೇಲೆ, ತಮ್ಮ ಮನೆಗೆ ಹೋಗದೆ ನೇರವಾಗಿ ಬಲರಾಮನ ಮನೆಗೆ ಬಂದರು. ಆಗ ಮಧ್ಯಾಹ್ನ ೩ ಗಂಟೆ. ಶ್ರೀರಾಮಕೃಷ್ಣರು ಮಾಸ್ಟರ್‌ರತ್ತ ನೋಡಿ ಸನ್ನೆಮಾಡಿ ಕೇಳಿದರು, "ಚಿಕ್ಕ ನರೇನನ ವಿಚಾರವೇನು?" ಎಂದು.

ನರೇಂದ್ರನಾಥ ಮಿತ್ರ ಮಾಸ್ಟರವರ ವಿದ್ಯಾರ್ಥಿ. ಸ್ವಾಮಿ ವಿವೇಕಾನಂದರ ಹೆಸರೂ ನರೇಂದ್ರನಾದ್ದರಿಂದ ಈತನನ್ನು "ಛೋಟೋ (ಚಿಕ್ಕ) ನರೇನ್" ಎಂದು ಕರೆಯಲಾಗುತ್ತಿತ್ತು. ಈತನಲ್ಲಿ ಮುಗ್ಧ ಪವಿತ್ರಭಾವವನ್ನು ಕಂಡು ಶ್ರೀರಾಮಕೃಷ್ಣರು ಈತನಿಗೆ ತುಂಬ ಸ್ನೇಹವನ್ನು ತೋರಿಸುತ್ತಿದ್ದರು. ೧೮೮೪ರ ಮಾರ್ಚ್ ತಿಂಗಳಲ್ಲಿ ಈತ ಮೊದಲ ಬಾರಿ ರಾಮಕೃಷ್ಣರನ್ನು ಭೇಟಿಮಾಡಿದನು. ನಂತರ ಆಗಾಗ ಯಾರಿಗೂ ಹೇಳದೆ ಸ್ಕೂಲಿನಿಂದ ನೇರವಾಗಿ ದಕ್ಷಿಣೇಶ್ವರಕ್ಕೆ ಅವರನ್ನು ಕಾಣಲು ಹೋಗುತ್ತಿದ್ದನು.

ಈಗ ಮಾಸ್ಟರ್ ಮಹಾಶಯರನ್ನು ಕಂಡು ರಾಮಕೃಷ್ಣರಿಗೆ ತಮ್ಮ ಬಳಿ ಬರುವ ಬಾಲಕ ಭಕ್ತರ ನೆನಪಾಗಿ, ಅವರುಗಳ ವಿಚಾರವಾಗಿ ಮಾತನಾಡುತ್ತಿದ್ದಾರೆ. ಮಾಸ್ಟರ್ ತಮ್ಮ ಇನ್ನೊಬ್ಬ ವಿದ್ಯಾರ್ಥಿ ಬಂಕಿಮನ ಭಕ್ತಿಯ ವಿಚಾರವಾಗಿ ಅವರಿಗೆ ಹೇಳಿದರು. ಕೇಳಿ ರಾಮಕೃಷ್ಣರು ಆನಂದದಿಂದ ನಗುತ್ತಿದ್ದಾರೆ. ಈ ಸಮಯದಲ್ಲಿಯೇ ನರೇಂದ್ರ ಕೋಣೆಯೊಳಗೆ ಬಂದ. ಆತ ಮಾಸ್ಟರನ್ನು ನೋಡಿದವನೇ ಶ್ರೀರಾಮಕೃಷ್ಣರಿಗೆ ಹೇಳುತ್ತಾನೆ, "ನಿನ್ನೆ ರಾತ್ರಿ ನೋಡುತ್ತೇನೆ ಇವರು ಎರಡು ಸೊಳ್ಳೆ ಪರದೆಗಳ ನಡುವಿನ ಜಾಗದಲ್ಲಿ ಮಲಗಿಕೊಂಡಿದ್ದಾರೆ. ತುಂಬ ಒಳ್ಳೆಯ ಮನುಷ್ಯ ತಾನೇ.... " ಮಾಸ್ಟರರ ಉತ್ತರವನ್ನು ನಿರೀಕ್ಷಿಸಿ ಶ್ರೀರಾಮಕೃಷ್ಣರು ಅವರತ್ತ ನೋಡುತ್ತಿದ್ದಾರೆ. ಅಷ್ಟರಲ್ಲಿ ಮುರ್ಷಿದಾಬಾದ್‌ನಿಂದ ಬಂದ ಒಬ್ಬ ವೈಷ್ಣವ ಸಂನ್ಯಾಸಿ ಕೋಣೆಯನ್ನು ಪ್ರವೇಶಿಸಿದನು. ಭಕ್ತ ನವಗೋಪಾಲ್ ಘೋಷ್ ಅವನನ್ನು ಕರೆತಂದಿದ್ದಾನೆ. "ರಾಮಕೃಷ್ಣ ಪೂಂಥಿ" ಈ ಘಟನೆಯ ಬಗ್ಗೆ ಹೇಳುತ್ತದೆ:

ನಡೆಯಿತೊಮ್ಮೆ ಕೇಳಿಲ್ಲಿ ಶ್ರೀಪ್ರಭುವಿನದೊಂದು ಲೀಲೆ
ಸಂಧ್ಯೆಯಾಗಲಿನ್ನೇನು ಅತ್ಯಲ್ಪ ವೇಳೆ.
ಗೌರಾಂಗ ಭಕ್ತನೊಬ್ಬ - ವೈಷ್ಣವ ನಂದನ
ಹರಿಭಕ್ತಿಯ ಅಂಕಿತದಿ ತನುವಾತನ ಸುಶೋಭನ
ಪ್ರಭುವಿನ ಮಹಿಮೆಯನಾತನು ಆಲಿಸಿ
ಆಗಮಿಸಿದನಂತ್ಯದಿ ಬಹು ಮಾರ್ಗವ ಸವೆಸಿ
... ... ...
ತುಂಬಿದ ವಿಶ್ವಾಸದಿ ಬಂದನಾತನು ದರುಶನಕೆ
ಗೌರಾಂಗ ಚರಿತೆಯೇ ಶ್ರೀಪ್ರಭುವಿನ ಚರಿತೆ
ಮನದೊಳು ಈ ವಿಸ್ಮಯ ಚಿಂತನೆ
ಬಂದಿಳಿದನು ಕಡೆಗೂ ಬಸುವಿನ ಭವನಕೆ.

ಭಕ್ತರಿಂದ ಆವೃತರಾಗಿ ಕುಳಿತಿದ್ದ ಶ್ರೀರಾಮಕೃಷ್ಣರ ಪಾದದ ಮೇಲೆ ತನ್ನ ಮಸ್ತಕವನಿಟ್ಟು, ವೈಷ್ಣವ ಸಂನ್ಯಾಸಿ ನಮಸ್ಕಾರ ಮಾಡಿದನು. ಅವರು ಸನ್ನೆಮಾಡಿ ಕುಳಿತುಕೊಳ್ಳುವಂತೆ ಹೇಳಿದರು. ನವಗೋಪಾಲ ಘೋಷ್ ಆತನ ಪರಿಚಯ ಮಾಡುತ್ತಿದ್ದಂತೆಯೆ ವೈಷ್ಣವ ಬಾಬಾಜಿ ಎರಡೆರಡು ಸಲ ಎದ್ದು ಅವರಿಗೆ ಮತ್ತೆ ಮತ್ತೆ ನಮಸ್ಕರಿಸಿದನು.

ಶ್ರೀರಾಮಕೃಷ್ಣರು (ಕೈಯಲ್ಲಿ ಸನ್ನೆಮಾಡುತ್ತ) "ಈತನಲ್ಲಿ ಒಳ್ಳೆಯ ಸತ್ತ್ವವಿದೆ." 'ರಾಮಕೃಷ್ಣ ಪೂಂಥಿ'ಯ ಲೇಖಕ ಇಲ್ಲಿ ಇನ್ನೊಂದು ವಿಷಯವನ್ನು ಬೆಳಕಿಗೆ ತಂದಿದ್ದಾರೆ—ಶ್ರೀರಾಮಕೃಷ್ಣರು ಆ ಸಮಯದಲ್ಲಿ ಒಂದು ಬೀಸಣಿಗೆಯಿಂದ ತಾವೇ ಗಾಳಿ ಬೀಸಿಕೊಳ್ಳುತ್ತಿದ್ದರಂತೆ. ವೈಷ್ಣವ ಸಾಧುವಿಗೆ ಮನಸ್ಸಿನಲ್ಲಿ ಅವರಿಗೆ ಗಾಳಿ ಬೀಸುವ ಇಚ್ಛೆ ಉಂಟಾಯಿತು. ಅದನ್ನಾತ ಪ್ರಕಟಿಸುವಷ್ಟರಲ್ಲಿ...."ಅರಿತನಾಗಲೇ ಪ್ರಭು ಹೃದಯದಾಳದಾ ಅಭೀಪ್ಸೆಯನು, ಸಮರ್ಪಿಸಿದನಾ ವೈಷ್ಣವ ಕರದಿ ಬೀಸಣಿಗೆಯನು." ವೈಷ್ಣವ ಬಾಬಾಜಿ ಅತ್ಯಾನಂದದಿಂದ ಅವರಿಗೆ ಗಾಳಿ ಬೀಸಲಾರಂಭಿಸಿದನು.

*ಶ್ರೀರಾಮಕೃಷ್ಣರು* : "ಇವತ್ತು ನನ್ನದೊಳ್ಳೆ ಅದೃಷ್ಟ....."

ಹತ್ತಿರದಲ್ಲಿಯೇ ಇದ್ದ ನರೇಂದ್ರ ಮೆಲ್ಲಗೆ ಮಾತನಾಡುತ್ತಿದ್ದ ಅವರ ಮಾತಿನ ಅರ್ಥವನ್ನು ಉಳಿದವರಿಗೆ ವಿವರಿಸಿದನು.

*ವೈಷ್ಣವ ಭಕ್ತ* : "ಸರಿಯಾಗಿಯೇ ಹೇಳಿದಿರಿ. ಜಗಾಯ್ ಮಧಾಯ್ ಎಂಬಿಬ್ಬರು ದುಷ್ಟರನ್ನು ನಿತಾಯ್ ಉದ್ಧಾರ ಮಾಡಿದ್ದನಲ್ಲಾ, ಹಾಗೆಯೇ ಇದೂ."

ಈ ಮಾತನ್ನು ಕೇಳಿ ಶ್ರೀಚೈತನ್ಯನ ಜೀವನವನ್ನು ಸ್ಮರಿಸಿ, ಶ್ರೀರಾಮಕೃಷ್ಣರ ಕಣ್ಣಿನಿಂದ ಪ್ರೇಮಾಶ್ರು ಸುರಿಯಲಾರಂಭಿಸಿತು. ಅವರು ಧಿಗ್ಗನೆ ಹಾಸಿಗೆಯಿಂದ ಎದ್ದು ವೈಷ್ಣವ ಬಾಬಾಜಿಯ ಸಮೀಪಕ್ಕೆ ಹೋದರು. ಶ್ರೀರಾಮಕೃಷ್ಣರು ಭಾವಾವಿಷ್ಟರಾಗಿದ್ದಾರೆ.

ದೇವ ದುರ್ಲಭ ಆ ಶ್ರೀಚರಣವನ್ನೆತ್ತಿ
ಇಟ್ಟನಾ ಭಾಗ್ಯವಂತನ ಎದೆಯ ಮೇಲೊತ್ತಿ
ಧನ್ಯ! ಧನ್ಯನಾ ವೈಷ್ಣವ ತನುವಾಯಿತು ರೋಮಾಂಚಿತ....

ವೈಷ್ಣವ ಬಾಬಾಜಿ ತುಂಬ ಎಚ್ಚರಿಕೆಯಿಂದ ಅವರ ಚರಣವನ್ನು ತನ್ನ ಎದೆಗೆ ಒತ್ತಿ ಹಿಡಿದಿದ್ದಾನೆ.

*ಶ್ರೀರಾಮಕೃಷ್ಣರು* : "ಕೃಷ್ಣ ಚೈತನ್ಯ ಎಂದು ಹೇಳು."

ಭಾವೋನ್ಮತ್ತನಾಗಿ ವೈಷ್ಣವ ಸಾಧು ಕೂಗಿ ಹೇಳುತ್ತಿದ್ದಾನೆ: "ಗೌರ, ಕೃಷ್ಣ ಚೈತನ್ಯ ಪ್ರೇಮದಯಾಳು ನಿತಾಯ್...'

ಭಾವದಿಂದ ವಿಹ್ವಲರಾಗಿ ಶ್ರೀರಾಮಕೃಷ್ಣರು ಪ್ರೇಮಾಶ್ರು ಸುರಿಸುತ್ತಿದ್ದಾರೆ. ಕೈಯನ್ನು ಕಣ್ಣುಗಳ ಎದುರಿಗೆ ಅಡ್ಡವಾಗಿ ಹಿಡಿದಿದ್ದಾರೆ. ಆದರೂ ಧಾರೆ ಧಾರೆಯಾಗಿ ಕಣ್ಣೀರು ಸುರಿಯುತ್ತಿರುವುದು ಕಾಣಿಸುತ್ತಿದೆ. ಭಾವಾವಿಷ್ಟರಾದ ಅವರ ಪಾದವು ಇನ್ನೂ ವೈಷ್ಣವ ಭಕ್ತನ ಎದೆಯ ಮೇಲೆಯೇ ಇದೆ. ಆತನೂ ತನ್ನೆರಡೂ ಕೈಗಳಲ್ಲಿ ಆ ಚರಣವನ್ನು ಎದೆಗೆ ಒತ್ತಿ ಹಿಡಿದುಕೊಂಡಿದ್ದಾನೆ. ಭಗವತ್ ಪ್ರೇಮೋನ್ಮಾದದ ಈ ಮನೋಹರ ದೃಶ್ಯವನ್ನು ಉಳಿದವರು ವಿಸ್ಮಿತರಾಗಿ ವೀಕ್ಷಿಸುತ್ತಿದ್ದಾರೆ.

ಈಗ ಶ್ರೀರಾಮಕೃಷ್ಣರ ಮನಸ್ಸು ಹೊರ ಜಗತ್ತಿನತ್ತ ಜಾಗೃತವಾಗುತ್ತಿದೆ. ಅವರ ದೃಷ್ಟಿ ವೈಷ್ಣವ ಬಾಬಾಜಿಯ ಮೇಲೆ ಬಿದ್ದಿತು. ಅವರು ಮನಸ್ಸನ್ನು ಶರೀರದತ್ತ ಎಳೆಯಲು ಪ್ರಯತ್ನಿಸುತ್ತಿದ್ದಾರೆ. ರಾಮಕೃಷ್ಣರು (ವೈಷ್ಣವನಿಗೆ) : "ನನ್ನ ಕಾಯಿಲೆಯನ್ನು ವಾಸಿಮಾಡು ನೋಡೋಣ. ಯಾವ ಔಷಧ ಒಳ್ಳೆಯದು ಹೇಳು...."

ಭಾವಾವಿಷ್ಟರಾಗಿ ಮತ್ತೊಬ್ಬ ವ್ಯಕ್ತಿಯ ಎದೆಯ ಮೇಲೆ ಕಾಲಿಟ್ಟ ವಿಚಾರವಾಗಿ ರಾಮಕೃಷ್ಣರು ಚಿಂತಿತರಾಗಿದ್ದಾರೆ. ಈ ವಿಚಾರವಾಗಿ ತಮ್ಮನ್ನು ಸಮಾಧಾನಿಸಿಕೊಳ್ಳುವಂತೆ ಮಾತನಾಡುತ್ತಿದ್ದಾರೆ : "ಇದೇಕೆ ಹೀಗಾಯಿತೆಂದು ಈಗ ತಿಳಿಯಿತು. ಮಹಾವಾಯು ಮೇಲೆದ್ದು ಎದೆ ಧಡ್ ಧಡ್ ಎನ್ನುತ್ತಿತ್ತು. ಆಗ ಅಜ್ಞಾನ ಹೊರಟುಹೋಗುತ್ತದೆ. ಇದೇನು ಅಪರಾಧವೇ?" ಶ್ರೀರಾಮಕೃಷ್ಣರು ಸ್ವಲ್ಪ ತಡೆದು, ತಮ್ಮ ಶರೀರವನ್ನು ನಿರ್ದೇಶಿಸಿ ಮತ್ತೆ ಹೇಳುತ್ತಿದ್ದಾರೆ, "ಇದರೊಳಗೆ ಏನೋ ಒಂದು ಇದೆ" ಎಂದು. (ಮುಂದುವರಿಯುವುದು.)

ಬಿಡದೆ ಕಡೆದೊಡಲ್ಲದೆ ಮೊಸರಿಟ್ಟ ಕೆನೆಹಾಲ
ನುಡಿದೊಡೇನೊಳಗಿಂದ ತೇಲಿ ಬರುವುದೆ ಬೆಣ್ಣೆ?
ಬಿಡು ಮಾತು—ಆ ದೇವನನು ಕಾಣುವಾಸೆಯಿರೆ
ದೃಢತೆ ಸಾಧನೆಗಿರಲಿ—ರಾಮಕೃಷ್ಣ

ಕರ್ತನವ ಜಲದಂತೆ ನಿರಾಕಾರನೂ ಹೌದು
ಮತ್ತೆ ಸಾಕಾರನೂ. ಭಕ್ತಿ-ಶೈತ್ಯಕೆ ಹಿಮದಿ
ವ್ಯಕ್ತಗೊಳುವುದು ರೂಪು, ಜ್ಞಾನದುಷ್ಣತೆಯಲ್ಲಿ
ಮತ್ತಳಿವು ಆವಿಯಲಿ—ರಾಮಕೃಷ್ಣ

ಒಳಿತನ್ನೆ ಪರಿತಪಿಸುತಿರು ನಿರಂತರ ನೀನು
ಬಳಿಕ ಪರಿಶುದ್ಧನಾಗಬೇಕೆಂಬಿಚ್ಛೆಯಿರೆ
ಕಳುಹಿಸುವನಾದೇವ ನಿನ್ನ ಬಳಿ ಸದ್ಗುರುವ-
ಬೆಳೆಸಿಕೋ ಆ ಶ್ರದ್ಧೆ—ರಾಮಕೃಷ್ಣ

ಇರುವೆ ಹೆಜ್ಜೆಯ ದನಿಯ ಕೇಳಬಲ್ಲಾತನವ
ಮೊರೆಯಿಡಲು ನಿನ್ನ ದನಿ ಕೇಳಲರಿಯನೆ ಹೇಳು?
ಪರಿಚರಿಸು ನಿನಗೆ ಸರಿ ತೋರ್ದ ರೀತಿಯೊಳವನ
ಇರಲಾರ ಕೇಳದಲೆ—ರಾಮಕೃಷ್ಣ

ದೊಡ್ಡ ಮುಳ್ಳಿನ ಗಿಡಕೆ ರುಚಿಯುಂಟೆ, ಸವಿಯುಂಟೆ?
ಅಡ್ಡ ಚಪ್ಪರಿಸಗೆದು ನೋವು, ರಕ್ತವ ನುಂಗಿ
ದಡ್ಡ ಒಂಟೆಯು ಬಿಡದು ತಿನ್ನುವುದ, ಅದರಂತೆ
ಹೆಡ್ಡ ಪ್ರಾಪಂಚಿಕನು—ರಾಮಕೃಷ್ಣ

ದೀವಿಗೆಗೆ ಚಣ ಸಾಕು ಕೋಣೆಯಲಿ ಮರೆ ಮಾಡೆ
ಆ ವರುಷ ಕೋಟಿಗಳ ಕತ್ತಲೆಯ ರಾಶಿಯನು—
ಸಾವಿರ ನೂರು ಹುಟ್ಟಿನ ಜ್ಞಾನದೋಷಗಳು
ದೈವಕೃಪೆಯೊಳಗಂತೆ— ರಾಮಕೃಷ್ಣ

— *ಕಾಸರವಳ್ಳಿ, ಜಿ. ಸತೀಶ, ಬೆಂಗಳೂರು*

ಈ ಲೇಖನದ ಪ್ರಾಯೋಜಕರು : ಶೇಷಸಾಯಿ ಇಂಟೀರಿಯರ್ಸ್, ೮೭, ಎಸ್.ಆರ್. ರಸ್ತೆ, ಬೆಂಗಳೂರು ೫೬೦ ೦೦೨
ಪ್ಲೈಸಸ್ ಪ್ಯಾನೆಲ್ ದಾಸ್ತಾನುಗಾರರು, ಫ್ಲಷ್ ಡೋರ್ಸ್, ಪಿ.ವಿ.ಸಿ. ಡೋರ್ಸ್, ತಯಾರಕರು